ಮೊಗಲರ ಕಾಲದ ನಿರ್ಮಾಣ ಕಲೆ

ಮೊಗಲರ ನಿರ್ಮಾಣ ಕಲೆ ಅಂದರೆ ಮೊಗಲರು ಕ್ರಿ.ಶ. ಹದಿನಾರರಿಂದ ಹದಿನೆಂಟನೆಯ ಶತಮಾನಗಳ ವರೆಗೆ ತಾವು ಜಯಿಸಿದ ಪ್ರದೇಶಗಳಲ್ಲಿ, ವಿಶೇಷತಃ ಅವಿಭಜಿತ ಭಾರತ ಉಪಭೂಖಂಡದಲ್ಲಿ ನಿರ್ಮಿಸಿದ ಕಟ್ಟಡಗಳಾಗಿವೆ. ಮೊಗಲರ ನಿರ್ಮಾಣ ಕಲೆಯ ಮಾದರಿಗಳನ್ನು ಇಂದು ಭಾರತ, ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಬಂಗ್ಲಾದೇಶಗಳಲ್ಲಿ ಕಾಣಬಹುದಾಗಿದೆ. ಮೊಗಲರು ಸಮಾಧಿಗಳನ್ನು ನಿರ್ಮಿಸುವ ವಿಶೇಷ ವ್ಯವಸ್ಥೆಯನ್ನು ಮಾಡಿದ್ದರು. ಅದು ವಸ್ತುತಃ ಇಸ್ಲಾಮೀ ಶರೀಅತ್‌ನ ಬೋಧನೆಗಳಿಗೆ ವಿರುದ್ಧವಾಗಿತ್ತು ಹಾಗೂ ಇಸ್ಲಾಮ್‌ನಲ್ಲಿ ಅದಕ್ಕೆ ಯಾವುದೇ ಅವಕಾಶವಿಲ್ಲ. ಇದಕ್ಕೆ ಪ್ರಮುಖ ಕಾರಣ ಇಸ್ಲಾಮ್ ಕುರಿತಾಗಿರುವ ಅವರ ಅಲ್ಪಜ್ಞಾನ ಮತ್ತು ಪುರಾತನ ಭಾರತೀಯ ಸಂಸ್ಕೃತಿಯ ಪ್ರಭಾವವಾಗಿತ್ತು.

ಮೊಗಲ್ ಅರಸರು ಕೇವಲ ನಿರ್ಮಾಣ ಕಲೆಯ ಕುರಿತು ಉತ್ತಮ ಆಸಕ್ತಿ ಹೊಂದಿದ್ದುದಲ್ಲ, ಬದಲಾಗಿ ಅವರಲ್ಲಿ ನಗರಗಳ ನಿರ್ಮಾಣ ಮತ್ತು ಕಟ್ಟಡ, ಉದ್ಯಾನಗಳ ನಿರ್ಮಾಣದಲ್ಲಿಯೂ ಆಸಕ್ತಿಯಿತ್ತು. ಢಾಕಾ, ದೆಹಲಿ, ಫತೇಹ್‌ಪುರ್ ಸಿಕ್ರಿ, ಗುಜರಾತ್ ಮತ್ತು ಔರಂಗಾಬಾದ್ ಇತ್ಯಾದಿ ನಗರಗಳು ಇವರ ದೆಸೆಯಿಂದಾಗಿಯೇ ನೆಲೆಗೊಂಡಿದ್ದುವು. ಆ ನಗರಗಳಲ್ಲಿ ಮತ್ತಿತರ ನಗರಗಳಲ್ಲಿಯೂ ಸುಂದರ ಕೋಟೆಗಳು, ಮಹಲುಗಳು, ಮಸೀದಿಗಳು, ಉದ್ಯಾನಗಳು, ಸೇತುವೆಗಳು ಮತ್ತು ಪ್ರಯಾಣಿಕರ ತಂಗುದಾಣಗಳನ್ನು ನಿರ್ಮಿಸಲಾಗಿತ್ತು. ಅವುಗಳ ಪೈಕಿ ದೊಡ್ಡ ಮೊತ್ತದ ಸ್ಮಾರಕಗಳು ಇಂದೂ ಅಸ್ತಿತ್ವದಲ್ಲಿವೆ. ಸುಂದರ ಕಟ್ಟಡಗಳ ನಿರ್ಮಾಣದಲ್ಲಿ ಉಪಭೂಖಂಡದ ಯಾವುದೇ ಕಾಲವು ಮೊಗಲರ ಕಾಲಕ್ಕೆ ಸಾಟಿಯಾಗಲಾರದು. ಅವರು ಯಾವೆಲ್ಲ ನಗರಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿದ್ದಾರೋ ಅವು ಇಂದಿಗೂ ಆ ನಗರಗಳ ಅತಿ ಸುಂದರ ಕಟ್ಟಡಗಳಾಗಿ ಪರಿಗಣಿಸಲ್ಪಡುತ್ತವೆ. ಅಷ್ಟೇ ಅಲ್ಲ, ಮುಸ್ಲಿಮರ ಉತ್ಥಾನದ ಎರಡನೆಯ ಕಾಲಘಟ್ಟದಲ್ಲಿ ಇಸ್ಲಾಮೀ ಜಗತ್ತಿನ ಅತಿ ಸುಂದರ ಮತ್ತು ಮನಮೋಹಕ ಕಟ್ಟಡಗಳು ಭಾರತ ಉಪಭೂಖಂಡದ ಮೊಗಲ್ ಅವಧಿಯಲ್ಲಿ ನಿರ್ಮಿತವಾಗಿವೆ ಎಂದರೆ ತಪ್ಪಾಗಲಾರದು. ಮೊಗಲ್ ಕಾಲದ ನಿರ್ಮಾಣ ಕಲೆಯು ಸ್ವಯಂ ಒಂದು ಮಾದರಿಯಾಗಿದೆ.

ತಾಜ್ ಮಹಲ್: ಇದು ಮೊಗಲ್ ಕಾಲಘಟ್ಟದ ನಿರ್ಮಾಣ ಕಲೆಯ ಒಂದು ಭವ್ಯ ಕೊಡುಗೆ ಮತ್ತು ಅತ್ಯುತ್ತಮ ಮಾದರಿಯಾಗಿದೆ. ಅದನ್ನು ಮೊಗಲ್ ಸಾಮ್ರಾಟ ಶಾಹ್ ಜಹಾನನು ತನ್ನ ಪತ್ನಿ ಮುಮ್ತಾಝ್ ಮಹಲ್‌ಳ ಸ್ಮರಣಾರ್ಥ ಕಟ್ಟಿಸಿದ್ದನು. ಅದರ ನಿರ್ಮಾಣ ಶೈಲಿಯು ಪರ್ಶಿಯನ್, ತುರ್ಕಿಶ್, ಭಾರತೀಯ ಮತ್ತು ಇಸ್ಲಾಮೀ ನಿರ್ಮಾಣ ಶೈಲಿಯ ಒಟ್ಟು ಸಮಾಹಾರವಾಗಿತ್ತು. 1983ರಲ್ಲಿ ತಾಜ್ ಮಹಲನ್ನು ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯು (UNESCO) ವಿಶ್ವ ಸಾಂಸ್ಕೃತಿಕ ಪರಂಪರೆಗಳಲ್ಲಿ ಸೇರಿಸಿತು. ಅದರೊಂದಿಗೇ ವಿಶ್ವ ಸಾಂಸ್ಕೃತಿಕ ಪರಂಪರೆಯ ಸಮಗ್ರ ವ್ಯಾಖ್ಯೆಯನ್ನು ಹೊಂದಿರುವ ಅತ್ಯುತ್ತಮ ನಿರ್ಮಾಣವೆಂದು ಹೇಳಲಾಯಿತು. ತಾಜ್ ಮಹಲನ್ನು ಭಾರತದ ಇಸ್ಲಾಮೀ ನಿರ್ಮಾಣ ಕಲೆಯ ಪ್ರಾಯೋಗಿಕ ಮತ್ತು ಅನುಪಮ ಮಾದರಿಯೆಂದೂ ಹೇಳಲಾಗುತ್ತದೆ. ಈ ಕಟ್ಟಡದ ನಿರ್ಮಾಣವು ಕ್ರಿ.ಶ. 1625ರಿಂದ 1650ರ ವರೆಗೆ ಒಟ್ಟು 25 ವರ್ಷಗಳ ಅವಧಿಯಲ್ಲಿ ಪೂರ್ಣಗೊಂಡಿತ್ತು. ಇದರ ನಿರ್ಮಾಣದಲ್ಲಿ ನಾಲ್ಕೂವರೆ ಕೋಟಿ ರುಪಾಯಿಗಳು ವ್ಯಯವಾಗಿದ್ದುವು ಮತ್ತು ಇಪ್ಪತ್ತು ಸಾವಿರ ವಾಸ್ತುಶಿಲ್ಪಿಗಳು ಮತ್ತು ಕಾರ್ಮಿಕರು ಇದಕ್ಕಾಗಿ ದುಡಿದಿದ್ದರು. ಇಡೀ ಕಟ್ಟಡವು ಅಮೃತಶಿಲೆಯಿಂದ ನಿರ್ಮಿಸಲ್ಪಟ್ಟಿದೆ. ಅದರ ಉದ್ದ ಮತ್ತು ಅಗಲವು ತಲಾ 130 ಅಡಿ ಹಾಗೂ ಎತ್ತರವು 200 ಅಡಿಗಳಾಗಿವೆ. ಕಟ್ಟಡದ ಅಮೃತಶಿಲೆಯ ಗೋಡೆಗಳಲ್ಲಿ ಬಣ್ಣ ಬಣ್ಣದ ರತ್ನಗಳಿಂದ ಅತಿ ಸುಂದರ ಕುಸುರಿ ಕೆಲಸವನ್ನು ಮಾಡಲಾಗಿದೆ.

www.uzairfalahi.com

ಸಮಾಧಿಯ ಒಳ–ಹೊರಗುಗಳಲ್ಲಿ ಕುಸುರಿ ಕೆಲಸದ ರೂಪದಲ್ಲಿ ಪವಿತ್ರ ಕುರ್‌ಆನಿನ ವಚನಗಳನ್ನು ಕೆತ್ತಲಾಗಿದೆ. ಕಟ್ಟಡದ ನಾಲ್ಕೂ ಮೂಲೆಗಳಲ್ಲಿ ಒಂದೊಂದು ಮಿನಾರವಿದೆ. ನೆಲದಿಂದ ಎಷ್ಟೋ ಅಡಿ ಎತ್ತರದಲ್ಲಿರುವ ಕಟ್ಟಡದ ಜಗಲಿಯು ಕೆಂಪುಕಲ್ಲಿನಿಂದ ಕಟ್ಟಲಾಗಿದೆ. ಅದರ ಹಿಂಭಾಗದಲ್ಲಿ ಯಮುನಾ ನದಿಯು ಹರಿಯುತ್ತಿದೆ ಮತ್ತು ಮುಂಭಾಗದಲ್ಲಿ ಒಂದು ಕೊಳವಿದೆ. ಅದರಲ್ಲಿ ಕಾರಂಜಿಗಳನ್ನು ಅಳವಡಿಸಲಾಗಿದೆ. ಅಂತೆಯೇ ಮೊಗಲ್ ಶೈಲಿಯ ಒಂದು ಸುಂದರ ಉದ್ಯಾನವೂ ಇದೆ. ಈ ಸಮಾಧಿಯಲ್ಲಿ ರಾಣಿ ಮುಮ್ತಾಝ್ ಮಹಲ್ ಮತ್ತು ಶಾಹ್ ಜಹಾನನ ಗೋರಿಗಳಿವೆ.

ದೆಹಲಿಯ ಕೆಂಪುಕೋಟೆ: ಯಮುನಾ ನದಿಯ ಸನಿಹದಲ್ಲೇ ಕಟ್ಟಲಾಗಿರುವ ಕೆಂಪುಕೋಟೆಯು ಮೊಗಲ್ ಸಾಮ್ರಾಜ್ಯದ ಸ್ವರ್ಣಯುಗದ ಸ್ಮಾರಕವಾಗಿದೆ. ಇದನ್ನು ಹದಿನೇಳನೆಯ ಶತಮಾನದಲ್ಲಿ ಮೊಗಲ್ ಸಾಮ್ರಾಟ ಶಾಹ್ ಜಹಾನ್ ಕಟ್ಟಿಸಿದ್ದನು. ಇದೇ ಕೋಟೆಯ ಖಾಸಗಿ ದರಬಾರಿನಲ್ಲಿ ಮಯೂರಾಸನವಿತ್ತು. ಅದರಲ್ಲಿ ಕುಳಿತು ಮೊಗಲ್ ಸಾಮ್ರಾಟನು ಭಾರತದ ಉದ್ದಗಲಗಳ ಆಡಳಿತವನ್ನು ನಡೆಸುತ್ತಿದ್ದನು.

ಕೋಟೆಯಲ್ಲಿ ಎರಡು ಬಾಗಿಲುಗಳಿದ್ದುವು. ಅವುಗಳ ಪೈಕಿ ಒಂದನ್ನು ದಿಲ್ಲೀ ದ್ವಾರ, ಇನ್ನೊಂದನ್ನು ಲಾಹೋರಿ ದ್ವಾರ ಎಂದು ಕರೆಯಲಾಗುತ್ತದೆ. ಈ ಕೋಟೆಯನ್ನು ನಿರ್ಮಿಸಿದ ಸಮಯದಲ್ಲಿ ಯಮುನಾ ನದಿಯು ಕೋಟೆಯ ಆವರಣ ಗೋಡೆಗೆ ತಾಗಿಕೊಂಡು ಹರಿಯುತ್ತಿತ್ತು. ಆದರೆ ಇಂದು ಸ್ವಲ್ಪ ಅಂತರದಲ್ಲಿ ಹರಿಯುತ್ತಿದೆ. ಇಂದಿಗೂ ಪ್ರತಿ ವರ್ಷ ಸ್ವಾತಂತ್ರ್ಯ ದಿನಾಚರಣೆಯಂದು ದೇಶದ ಪ್ರಧಾನ ಮಂತ್ರಿಯವರು ಇದೇ ಕೋಟೆಯ ಮೇಲಿನಿಂದ ಜನತೆಯನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

ದೆಹಲಿಯ ಜಾಮಿಅ ಮಸೀದಿ: ಇದು ಭಾರತದ ರಾಜಧಾನಿ ದೆಹಲಿಯ ಅತಿ ಪ್ರಮುಖವಾದ ಮಸೀದಿಯಾಗಿದೆ. ಇದನ್ನೂ ಮೊಗಲ್ ಸಾಮ್ರಾಟ ಶಾಹ್ ಜಹಾನನು ನಿರ್ಮಿಸಿದ್ದನು. ಇದರ ನಿರ್ಮಾಣ ಕಾರ್ಯವು 1656ರಲ್ಲಿ ಕೊನೆಗೊಂಡಿತ್ತು. ಇದು ಭಾರತದ ಬೃಹತ್ ಮತ್ತು ಪ್ರಸಿದ್ಧ ಮಸೀದಿಗಳಲ್ಲಿ ಒಂದಾಗಿದೆ. ಇದು ಹಳೆಯ ದೆಹಲಿಯ ಜನನಿಬಿಡ ಮತ್ತು ಪ್ರಸಿದ್ಧ ಕೇಂದ್ರ ಚಾಂದ್‌ನಿ ಚೌಕ್‌ನ ಆರಂಭದಲ್ಲಿ ನಿರ್ಮಿಸಲ್ಪಟ್ಟಿದೆ. ಮಸೀದಿಯ ಅಂಗಳದಲ್ಲಿ 25 ಸಾವಿರಕ್ಕಿಂತಲೂ ಹೆಚ್ಚು ಮಂದಿ ನಮಾಝ್ ನಿರ್ವಹಿಸಬಹುದಾಗಿದೆ. ಇದರ ನಿರ್ಮಾಣಕ್ಕೆ ಹತ್ತು ಲಕ್ಷ ರುಪಾಯಿಗಳು ವೆಚ್ಚವಾಗಿವೆ.

ಶಾಹ್ ಜಹಾನನು ತನ್ನ ಆಡಳಿತಾವಧಿಯಲ್ಲಿ ದೆಹಲಿ, ಆಗ್ರಾ, ಅಜ್ಮೀರ್ ಮತ್ತು ಲಾಹೋರ್‌ಗಳಲ್ಲಿ ದೊಡ್ಡ ದೊಡ್ಡ ಮಸೀದಿಗಳನ್ನು ಕಟ್ಟಿಸಿದ್ದಾನೆ. ದೆಹಲಿಯ ಜಾಮಿಅ ಮಸ್ಜಿದ್ ಮತ್ತು ಲಾಹೋರಿನ ಬಾದ್‌ಶಾಹಿ ಮಸ್ಜಿದ್‌ನ ವಿನ್ಯಾಸವು ಬಹುತೇಕ ಒಂದೇ ರೀತಿ ಇದೆ.

ಮಸೀದಿಯ ಅಂಗಳದ ವರೆಗೆ ಉತ್ತರ, ಪೂರ್ವ ಮತ್ತು ದಕ್ಷಿಣ ಹೀಗೆ ಮೂರು ದಾರಿಗಳಲ್ಲಿ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕಾಗಿದೆ. ಉತ್ತರ ಭಾಗದ ದ್ವಾರದಲ್ಲಿ 39, ಪೂರ್ವ ಭಾಗದ ದ್ವಾರದಲ್ಲಿ 35 ಮತ್ತು ದಕ್ಷಿಣ ಭಾಗದ ದ್ವಾರದಲ್ಲಿ 33 ಮೆಟ್ಟಿಲುಗಳಿವೆ. ಪೂರ್ವದ ದ್ವಾರವು ಸಾಮ್ರಾಟನು ಸಾಗುವ ದಾರಿಯಾಗಿತ್ತು. ಅಲ್ಲಿಂದ ಸಾಮ್ರಾಟನು ಮಸೀದಿಗೆ ಪ್ರವೇಶಿಸುತ್ತಿದ್ದನು.

ಮಸೀದಿಯು 261 ಅಡಿ ಉದ್ದ ಮತ್ತು 90 ಅಡಿ ಅಗಲವಿದೆ. ಅದರ ಛಾವಣಿಯಲ್ಲಿ ಮೂರು ಗುಂಬಜಗಳನ್ನು ನಿರ್ಮಿಸಲಾಗಿದೆ. 130 ಅಡಿ ಉದ್ದದ ಎರಡು ಮಿನಾರಗಳೂ ಮಸೀದಿಯ ದಾರಿಯಲ್ಲಿವೆ. ಮಸೀದಿಯ ಹಿಂಭಾಗದಲ್ಲಿ ನಾಲ್ಕು ಸಣ್ಣ ಮಿನಾರಗಳಿವೆ.

www.uzairfalahi.com

ಫತೆಹ್‌ಪುರ್ ಸಿಕ್ರಿ: ಈ ನಗರದ ನಿರ್ಮಾಣವನ್ನು ಮೊಗಲ್ ಅರಸ ಅಕ್ಬರನು 1570ರಲ್ಲಿ ಮಾಡಿಸಿದನು. ಈ ನಗರವು 1571ರಿಂದ 1585ರ ವರೆಗೆ ಮೊಗಲ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಇದು ಕಾರ್ಡೋಬದ ಅಝ್ಝುಹ್ರಾ ನಗರದಂತಹುದೇ ನಗರವಾಗಿತ್ತು. ಆದರೆ ಫತೆಹ್‌ಪುರ್ ಸಿಕ್ರಿಯ ಅದೃಷ್ಟವು ಅಝ್ಝುಹ್ರಾ ನಗರಕ್ಕಿಂತ ಉತ್ತಮವಾಗಿತ್ತು. ಏಕೆಂದರೆ ಅಝ್ಝುಹ್ರಾ ನಗರದ ಗಲ್ಲಿ–ಕೇರಿಗಳು ಬಹಳ ಬೇಗನೇ ನಾಶವಾಗಿ ಹೋಗಿದ್ದುವು ಮತ್ತು ಈಗ ಅಲ್ಲಿ ಪಳೆಯುಳಿಕೆಗಳ ಹೊರತು ಏನೂ ಉಳಿದಿಲ್ಲ. ಆದರೆ ಫತೆಹ್‌ಪುರ್ ಸಿಕ್ರಿಯ ಭವ್ಯ ಮಹಲುಗಳು ಮತ್ತು ಕಟ್ಟಡಗಳು ಈಗಲೂ ಸುಸ್ಥಿತಿಯಲ್ಲಿವೆ. ಅಲ್ಲದೆ ಜಗತ್ತಿನಾದ್ಯಂತದಿಂದ ಜನರು ಅದನ್ನು ಸಂದರ್ಶಿಸಲು ಬರುತ್ತಾರೆ. ಇವಲ್ಲದೆ ಮೊಗಲರ ಇನ್ನೂ ಅನೇಕ ಅವಿಸ್ಮರಣೀಯ ನಿರ್ಮಾಣಗಳಿವೆ. ಅವುಗಳನ್ನು ವಿವರಿಸಲು ಹೋದರೆ ಒಂದು ಬೃಹತ್ ಗ್ರಂಥವೇ ರಚನೆಯಾದೀತು.

ಉಸ್ಮಾನಿಯಾ ಕಾಲದ ನಿರ್ಮಾಣ ಕಲೆ

ಕ್ರಿ.ಶ. 1299ರಿಂದ 1922ರ ವರೆಗೆ ಅಸ್ತಿತ್ವದಲ್ಲಿದ್ದ ಒಂದು ಮುಸ್ಲಿಮ್ ಸಾಮ್ರಾಜ್ಯವಾಗಿತ್ತು ಉಸ್ಮಾನಿಯಾ ಸಾಮ್ರಾಜ್ಯ. ಅದರ ಆಡಳಿತಗಾರರು ತುರ್ಕರಾಗಿದ್ದರು. ತಮ್ಮ ಉತ್ಥಾನದ ಕಾಲದಲ್ಲಿ (16 ಮತ್ತು 17ನೇ ಶತಮಾನದಲ್ಲಿ) ಈ ಸಾಮ್ರಾಜ್ಯವು ಮೂರು ಖಂಡಗಳಲ್ಲಿ ಹರಡಿಕೊಂಡಿತ್ತು.

ಉಸ್ಮಾನಿಯಾ ಸಾಮ್ರಾಜ್ಯದ ಆರಂಭಿಕ ನಿರ್ಮಾಣ ಕಲೆಯು ಸಲ್ಜೂಕಿ ಶೈಲಿಯ ನಿರ್ಮಾಣದಿಂದ ಪ್ರಭಾವಿತಗೊಂಡಿತ್ತು. ಆದರೆ ಕಾನ್‌ಸ್ಟಾಂಟಿನೋಪಲ್ ಜಯಿಸಿದ ಬಳಿಕ ಇದು ರೋಮನ್ ನಿರ್ಮಾಣ ಶೈಲಿಯ ಪ್ರಭಾವಕ್ಕೊಳಗಾಯಿತು. ಆದರೆ ಬಳಿಕದ ಕಾಲಗಳಲ್ಲಿ ಅದರಲ್ಲಿ ಇನ್ನಷ್ಟು ಪ್ರಗತಿಯನ್ನು ಸಾಧಿಸಲಾಯಿತು. ಕ್ರಮೇಣ ಆಧುನಿಕ ಉಸ್ಮಾನಿಯಾ ನಿರ್ಮಾಣ ಶೈಲಿಯು ಜಗತ್ತಿನಾದ್ಯಂತ ಪ್ರಸಿದ್ಧವಾಯಿತು. ಉಸ್ಮಾನಿಯಾ ಸಾಮ್ರಾಟರು ನಿರ್ಮಾಣ ಕಲೆಯ ಕಡೆಗೆ ವಿಶೇಷ ಗಮನವನ್ನು ನೀಡಿದರು. ಯನೀ ಶಹರ್, ಬುರ್ಸಾ, ಎಡಿರ್ನೆ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳಲ್ಲಿ ಮಸೀದಿಗಳು, ಮದ್ರಸಾಗಳು ಮತ್ತು ಮೊಹಲ್ಲಗಳ ನಿರ್ಮಾಣ ಹಾಗೂ ಕಾನ್‌ಸ್ಟಾಂಟಿನೋಪಲ್ ವಿಜಯದ ಬಳಿಕ ಸಾಮ್ರಾಜ್ಯದಾದ್ಯಂತ ಉಸ್ಮಾನೀ ನಿರ್ಮಾಣಗಳು ಆ ಮಹಾನ್ ಸಾಮ್ರಾಜ್ಯದ ವೈಭವ ಮತ್ತು ಘನತೆಗೆ ಪ್ರತಿಬಿಂಬಗಳಾಗಿವೆ. ಅವು ಇಂದಿಗೂ ಆ ಗತ ವೈಭವದ ಸ್ಮಾರಕಗಳಾಗಿ ಉಳಿದಿವೆ. ಹದಿನಾಲ್ಕನೆಯ ಶತಮಾನದ ಉಸ್ಮಾನಿಯ ಕಾಲದ ಮಸೀದಿಗಳಲ್ಲಿ ಸಲ್ಜೂಕಿ ಶೈಲಿಯು ಎಲ್ಲೆಡೆ ವ್ಯಕ್ತವಾಗುತ್ತಿದೆ. ಅದರ ಅತಿ ಪ್ರಮುಖ ಉದಾಹರಣೆಯು ಬುರ್ಸಾದ ಭವ್ಯ ಮಸೀದಿಗಳಾಗಿವೆ. ಅವುಗಳಲ್ಲಿ ಬಾಯಝೀದ್ ಜಾಮಿಅ್ ಮತ್ತು ಔಲೂ ಜಾಮಿಅ್ ಪ್ರಮುಖವಾಗಿವೆ. ಹದಿನೈದನೆಯ ಶತಮಾನದ ಇಸ್ತಂಬೂಲ್‌ನ ಮಸೀದಿಗಳಲ್ಲಿ ಬುರ್ಸಾದ ಶೈಲಿಯನ್ನು ಅನುಕರಿಸಲಾಗಿದೆಯಾದರೂ ದೊಡ್ಡ ಮಸೀದಿಗಳಲ್ಲಿ ಅಯಾಸೂಫಿಯಾ ಜಾಮಿಅ್‌ನ ನಿರ್ಮಾಣ ಶೈಲಿಯನ್ನು ಅನುಕರಿಸಲಾಗಿದೆ. ಬೈಝಂಟೈನ್ ಇಗರ್ಜಿಯಾಗಿದ್ದ ಆ ಕಟ್ಟಡವನ್ನು ಕಾನ್‌ಸ್ಟಾಂಟಿನೋಪಲ್ ವಿಜಯದ ಬಳಿಕ ಮಸೀದಿಯಾಗಿ ಪರಿವರ್ತಿಸಲಾಗಿತ್ತು. ತುರ್ಕಿಶ್ ವಾಸ್ತುಶಿಲ್ಪಿಗಳು ಆಧುನಿಕ ಉಸ್ಮಾನಿಯಾ ನಿರ್ಮಾಣ ಶೈಲಿಯ ಅನೇಕ ಭವ್ಯ ಮತ್ತು ಉನ್ನತ ಕಟ್ಟಡಗಳನ್ನು ನಿರ್ಮಿಸಿದರು. ಅವುಗಳಲ್ಲಿ ಫಾತಿಹ್ ಜಾಮಿಅ್, ಸಲೀಮಿಯ್ಯ ಜಾಮಿಅ್, ಸುಲೈಮಾನಿಯ್ಯ ಜಾಮಿಅ್ ಮತ್ತು ತಾಕೂಯೇ ಜಾಮಿಅ್‌ಗಳು ಪ್ರಮುಖವಾದವುಗಳಾಗಿವೆ. ಉಸ್ಮಾನಿಯಾ ನಿರ್ಮಾಣ ಶೈಲಿಯು ಆ ಕಟ್ಟಡಗಳ ಮೂಲಕ ಇಂದಿಗೂ ಸಂಪೂರ್ಣ ವೈಭವದೊಂದಿಗೆ ಅಸ್ತಿತ್ವದಲ್ಲಿವೆ. ಅಷ್ಟೇ ಅಲ್ಲ, ಜಗತ್ತಿನಾದ್ಯಂತ ತುರ್ಕರು ಎಲ್ಲೆಲ್ಲ ಮಸೀದಿಗಳನ್ನು ನಿರ್ಮಿಸಿದ್ದಾರೋ, ಅಲ್ಲೆಲ್ಲ ಇದೇ ನಿರ್ಮಾಣ ಶೈಲಿಯನ್ನು ಬಳಸಿದ್ದಾರೆ. ಉಸ್ಮಾನಿಯಾ ನಿರ್ಮಾಣ ಶೈಲಿಯು ಸಿನಾನ್ ಪಾಶಾನ ಪ್ರಸ್ತಾಪದ ಹೊರತು ಅಪೂರ್ಣವೆನಿಸುವುದು. ಅವನು ತನ್ನ ಶೈಲಿ

www.uzarfahi.com

ಮತ್ತು ಪ್ರತಿಭೆಯಿಂದ ಆ ಕಾಲದ ನಿರ್ಮಾಣ ಕಲೆಗೆ ಇನ್ನಷ್ಟು ಮೆರುಗನ್ನು ನೀಡಿದ್ದನು. ಹದಿನಾರನೆಯ ಶತಮಾನದ ಉಸ್ಮಾನಿಯಾ ನಿರ್ಮಾಣಗಳಲ್ಲಿ ಸಿನಾನಿ ಶೈಲಿಯು ಎಲ್ಲೆಡೆ ರಾರಾಜಿಸುತ್ತದೆ. ಅವು ಇಂದಿಗೂ ಭವ್ಯ ರೂಪದಲ್ಲಿ ಅಸ್ತಿತ್ವದಲ್ಲಿವೆ. ಶಹಝಾದಾ ಮಸ್ಜಿದ್ ಮತ್ತು ಸಲೀಮಿಯ್ಯ ಮಸ್ಜಿದ್ ಈ ಮಹಾನ್ ವಾಸ್ತುಶಿಲ್ಪಿಯ ಕಲೆಗಾರಿಕೆಗೆ ಉದಾಹರಣೆಯಾಗಿದೆ. ಸಿನಾನನು ಕಾನ್‌ಸ್ಟಾಂಟಿನೋಪಲ್, ಅದ್ರಾನಾ ಮತ್ತಿತರ ನಗರಗಳಲ್ಲಿ ಅನೇಕ ಭವ್ಯ ಮಸೀದಿಗಳನ್ನು ನಿರ್ಮಿಸಿದ್ದಾನೆ. ಉಸ್ಮಾನಿಯಾ ನಿರ್ಮಾಣದ ತೋಪ್ ಕಾಪೀ ಮತ್ತು ದೂಲಮಾ ಬಾಗ್‌ಚಾ ಮಹಲುಗಳು ತಮ್ಮ ಕಾಲದ ನಿರ್ಮಾಣದ ಮಹೋನ್ನತ ಸಾಧನೆಗಳಾಗಿವೆ.

* * * * *

www.uzairfalahi.com